# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 942/2022**

**CW : 06 PW: 05**

**ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 27.02.2026**

ಹೆಸರು : ರಾಚಮ್ಮ
ಗಂಡನ ಹೆಸರು : ರಾಜಕುಮಾರ
ವಯಸ್ಸು : 34
ಉದ್ಯೋಗ : ಅಬಕಾರಿ ನಿರೀಕ್ಷಕರು
ವಾಸಸ್ಥಳ : ಮಡಿಕೇರಿ

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಿತ್ತಾಪುರ ವಲಯದಲ್ಲಿ ನಾನು ಅಬಕಾರಿ ಉಪ ನಿರೀಕ್ಷಕರು ಎಂದು ದಿ: 07/08/2023 ರಿಂದ 10/01/2025 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 10/10/2023 ರಂದು ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ಇವರಿಂದ ಪಡೆದುಕೊಂಡಿದ್ದು ಇರುತ್ತದೆ. ಪಿ.ಡಿ.ಓ ಮರತೂರ ಇವರಿಗೆ ಮಾಲೀಕತ್ವವನ್ನು ಅರಿಯಲು ಒಂದು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ಪಿ.ಡಿ.ಓ ಮರತೂರು ಇವರು ಕೃತ್ಯ ನಡೆದಿರುವ ಸ್ಥಳದ ಮಾಲಿಕತ್ವವನ್ನು ಕುರಿತು ವರದಿಯನ್ನು ಸಲ್ಲಿಸಿದ್ದು ಅದನ್ನು ನಾನು ಕಡತಕ್ಕೆ ಅಳವಡಿಸಿಕೊಂಡಿದ್ದು ಇರುತ್ತದೆ.

ದಿ: 30/10/2023 ರಂದು ಪ್ರಕರಣದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಚಾಸಾ-4 ಇವರನ್ನು ರಾಯಚೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು ಇರುತ್ತದೆ. ದಿ: 08/11/2023 ರಂದು ಪರತ ಬಂದಿರುವ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿಯವರ ಹೇಳಿಕೆಯನ್ನೂ ಸಹ ನಾನು ಪಡೆದುಕೊಂಡಿರುತ್ತೇನೆ. ದಿ: 13/09/2024 ರಂದು ಸಾಕಷ್ಟು ಸಾಕ್ಷಾಧಾರಗಳು ಇದ್ದ ಕಾರಣ ನಾನು ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದು ಇರುತ್ತದೆ. ಒಂದು ಬಾಕ್ಸಿನಲ್ಲಿ ತುಂಬಿದ ಚೀಲವನ್ನು ಈಗಾಗಲೇ ಮು.ಮಾ.1 ಎಂದು ನಿಶಾನೆಗೊಳಿಸಿದ್ದು ಅದನ್ನು ನೋಡಿ ಗುರುತಿಸುತ್ತಾರೆ.

ಪಿ.ಡಿ.ಓ ರವರಿಗೆ ಬರೆದ ಪತ್ರವನ್ನು ನಿ.ಪಿ.6 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.6 (ಎ) ಎಂದು, ಚಾಸಾ-4 ಇವರನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುವ ಕುರಿತು ಕಛೇರಿ ಪತ್ರವನ್ನು ನಿ.ಪಿ.7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.7 (ಎ) ಎಂದು, ಎಫ್.ಎಸ್.ಎಲ್. ವರದಿಯನ್ನು ನಿ.ಪಿ.8 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.8 (ಎ) ಎಂದು, ಗುನ್ನ ಸ್ಥಳದ ಮಾಲೀಕತ್ವದ ಬಗ್ಗೆ ನೀಡಿರುವ ದಾಖಲೆಯನ್ನು

ನಿ.ಪಿ.9 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.9 (ಎ) ಎಂದು ನಿಶಾನೆಗೊಳಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ನಿ.ಪಿ.6 ರಲ್ಲಿ ಪಿ.ಡಿ.ಓ ರವರ ಮೊಹರು ಮತ್ತು ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿ.ಪಿ.6 ಪಿ.ಡಿ.ಓ ಅವರ ಸಹಿ ಇಲ್ಲದ ಕಾರಣ ಅದು ಖೊಟ್ಟಿ ಅರ್ಜಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.9 ರಲ್ಲಿ ಮನೆಯ ವಿವರಣೆ ಇರುವುದಿಲ್ಲ ಎಂದರೆ ಸಾಕ್ಷಿದಾರರು ಪಿ.ಡಿ.ಓ ರವರು ನೀಡಿದ ವರದಿಯನ್ನು ನಾವು ಪಡೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಪುನ: ಸಾಕ್ಷಿದಾರರು ಪಿ.ಡಿ.ಓ ರವರು ನೀಡಿದ ವರದಿಯನ್ನು ನಾವು ಸಲ್ಲಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ. ನಿ.ಪಿ.9 ಖೊಟ್ಟಿ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ.

ನಿ.ಪಿ.9 ರಲ್ಲಿ ಮೇಲೆ ಸಹಿ ಹಾಗೂ ಮೊಹರು ಇರುವುದಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.7 ರಂತೆ ನಾನು ನಮ್ಮ ಸಿಬ್ಬಂದಿಯನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ ನಮ್ಮ ಕಛೇರಿಯ ಮೊಹರು ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಸಹಿ ಮಾತ್ರ ಇರುತ್ತದೆ ಸೀಲ್ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.8 ಖೊಟ್ಟಿ ವರದಿಯಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಈ ಪ್ರಕರಣದಲ್ಲಿ ಶಿವಶರಣಪ್ಪ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮು.ಮಾ.1 ರಂತೆ ಗುಜರಿ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿದಾರರು ಅದೇ ಥರಾ ಸಿಗಬಹುದು ಆದರೆ ಅವು ಇರುವುದಿಲ್ಲ ಎಂದು ಹೇಳುತ್ತಾರೆ. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 13/09/2024 ರಂದು ನಾನು ಖೊಟ್ಟಿ ದೋಷಾರೋಪಣೆ ಪಟ್ಟಿಯನ್ನು ಆರೋಪಿತಳ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತಳ ಅಂಗಡಿಯ ಕುರಿತು ನಾನು ವಿವರವಾಗಿ ವಿಶ್ಲೇಷಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ಇವರಿಗೆ ಸಹಾಯಗೊಳಿಸಲು ಅವರ ಬೆಂಬಲವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**